ಕನ್ನಡ ಅಭಿವೃದ್ಧಿ ಪ್ರಾಧಿಕಾರ
ವಿಧಾನಸೌಧ, ಬೆಂಗಳೂರು

# ಡಾ. ಸರೋಜಿನಿ ಮಹಿಷಿ ವರದಿಯ
# ಪರಿಷ್ಕೃತ ವರದಿ

ಭಾಗ – ೧

ರಾಜ್ಯ ಸರ್ಕಾರ ಅನುಷ್ಠಾನಗೊಳಿಸಬೇಕಾಗಿರುವ
ಮುಖ್ಯ ಶಿಫಾರಸುಗಳು

## ೨೦೧೭

ಪ್ರೊ. ಎಸ್.ಜಿ. ಸಿದ್ಧರಾಮಯ್ಯ
ಅಧ್ಯಕ್ಷರು

# ಡಾ. ಸರೋಜಿನಿ ಮಹಿಷಿ ವರದಿಯ ಪುನರ್ ಪರಿಶೀಲನಾ ಸಮಿತಿಯು ಸಲ್ಲಿಸಿರುವ ಶಿಫಾರಸು

# ಪರಿಷ್ಕೃತ ವರದಿ

## ಪೀಠಿಕೆ

### ಡಾ. ಸರೋಜಿನಿ ಮಹಿಷಿ ವರದಿ

ಸ್ಥಳೀಯರಿಗೆ ಉದ್ಯೋಗದಲ್ಲಿ ಆದ್ಯತೆ ಅನ್ನುವುದು ತೀರಾ ಸಹಜವಾದ ವಿಚಾರ. ಇಂದು ಇದು ವಿಶ್ವದಾದ್ಯಂತ ಕೇಳಿ ಬರುತ್ತಿರುವ ಕೂಗು. ಆದರೆ, ಅದು ಇಂದಿಗೂ ಹಲವು ರಾಜ್ಯಗಳಲ್ಲಿ ಆದರ್ಶವಾಗಿಯೇ ಉಳಿದಿದೆ. ಕರ್ನಾಟಕದಲ್ಲಿ ಸಾಕಷ್ಟು ಕೇಂದ್ರೋದ್ಯಮ, ಸಾರ್ವಜನಿಕ, ಖಾಸಗಿ ಉದ್ಯಮಗಳಿದ್ದರೂ ಕನ್ನಡಿಗರಿಗೆ ಸೂಕ್ತ ಪ್ರಮಾಣದಲ್ಲಿ ಉದ್ಯೋಗಾವಕಾಶಗಳು ದೊರೆತಿರಲಿಲ್ಲ. ಇದು ಸ್ವಾತಂತ್ರ್ಯಪೂರ್ವದಿಂದಲೂ ಇದ್ದ ಸ್ಥಿತಿ. ಕರ್ನಾಟಕ ಏಕೀಕರಣದ ನಂತರವೂ ಇದೆ ಪರಿಸ್ಥಿತಿ ಮುಂದುವರಿದಾಗ ಸ್ಥಳೀಯ ಕನ್ನಡಿಗರಲ್ಲಿ ಹತಾಶ ಭಾವನೆ ಮೂಡಿತ್ತು. ಇದನ್ನು ಗಮನಿಸಿ ರಾಜ್ಯ ಸರ್ಕಾರ ಕನ್ನಡಿಗರಿಗೆ ಉದ್ಯೋಗದಲ್ಲಿ ಸೂಕ್ತ ಅವಕಾಶ ಸಿಗುವಂತೆ ಮಾಡಲು ೧೯೮೧ರಿಂದ ಪ್ರಯತ್ನ ನಡೆಸಿದೆ. ಅದರಲ್ಲೂ ಅತೀ ಮಹತ್ವದ್ದು ಡಾ. ಸರೋಜಿನಿ ಮಹಿಷಿ ನೇತೃತ್ವದಲ್ಲಿ ಸಮಿತಿ ರಚನೆ ಮಾಡಿದ್ದು.

### ಮಹಿಷಿ ವರದಿ ಪರಿಷ್ಕರಣದ ಅಗತ್ಯತೆ

ರಾಜ್ಯದಲ್ಲಿ ಕನ್ನಡಿಗರ ಉದ್ಯೋಗ ಸಮಸ್ಯೆಯ ಸ್ವರೂಪ ಮತ್ತು ಪರಿಹಾರ ಮಾರ್ಗಗಳನ್ನು ಸೂಚಿಸಲು ಅಧ್ಯಯನ ನಡೆಸಿ, ದಾಖಲೆಗಳನ್ನು ಪರಿಶೀಲಿಸಿ ಕಾರ್ಯಸಾಧುವಾದ ವರದಿ ಸಲ್ಲಿಸಲು ಸಂಸದೆ ಡಾ. ಸರೋಜಿನಿ ಮಹಿಷಿ ಅವರ ಅಧ್ಯಕ್ಷತೆಯಲ್ಲಿ ೨೫.೧.೧೯೮೪ರಂದು ಸಮಿತಿಯನ್ನು ರಚಿಸಿತು.

ಸಮಿತಿಯು ಹಲವು ಉದ್ಯಮ, ಬ್ಯಾಂಕ್‌ಗಳಿಗೆ ಭೇಟಿ ನೀಡಿ, ಬೇರೆ ರಾಜ್ಯಗಳಿಂದ ಅಗತ್ಯ ಮಾಹಿತಿಯನ್ನು ತರಿಸಿಕೊಂಡು ಎಲ್ಲವನ್ನು ಗಮನಿಸಿ ೩೦.೧೨.೧೯೮೬ರಂದು ವರದಿ ಸಲ್ಲಿಸಿತು. ಈ ವರದಿಯನ್ನು ಗಮನಿಸಿ ಇದೇ ಮಾದರಿಯಲ್ಲಿ ಕೆಲವು ರಾಜ್ಯಗಳು ಕಾನೂನು ರಚಿಸಿವೆ ಎಂದರೆ ಮಹಿಷಿ ವರದಿಯ ಮಹತ್ವ ತಿಳಿಯುತ್ತದೆ.

ಈ ಸಮಿತಿಯು ವರದಿ ನೀಡಿದಾಗ ಸರ್ಕಾರಿ ವಲಯದಲ್ಲೇ ಹೆಚ್ಚು ಹೆಚ್ಚು ಉದ್ಯೋಗಗಳು ಸೃಷ್ಟಿ ಆಗುತ್ತಿದ್ದವು. ಈಗ ಜಾಗತೀಕರಣದ ಪರಿಣಾಮವಾಗಿ ಸರ್ಕಾರಿ ಉದ್ದಿಮೆಗಳು ಹಿನ್ನೆಲೆಗೆ ಸರಿಯುತ್ತಿವೆ. ಐ.ಟಿ, ಬಿ.ಟಿ, ಬಹುರಾಷ್ಟ್ರೀಯ ಕಂಪನಿಗಳು, ಖಾಸಗಿ ಬ್ಯಾಂಕ್‌ಗಳು ಇತ್ಯಾದಿ ಖಾಸಗಿ ವಲಯದಲ್ಲಿ ಉದ್ಯೋಗಾವಕಾಶಗಳು ಹೆಚ್ಚುತ್ತಿವೆ. ಮಹಿಷಿ ವರದಿ ಸಿದ್ಧಪಡಿಸಿದಾಗ ಈ ಉದ್ಯಮಗಳು ಇರಲಿಲ್ಲ. ಹಾಗಾಗಿ ಇವುಗಳ ಪ್ರಸ್ತಾಪ ವರದಿಯಲ್ಲಿ ಇಲ್ಲ. ಅಲ್ಲದೆ ರಾಜ್ಯದಲ್ಲಿ ಆಗ ಹೆಚ್ಚು ಕೇಂದ್ರ ಕಚೇರಿಗಳೂ ಇರಲಿಲ್ಲ. ಸಹಜವಾಗಿ ವರದಿಯಲ್ಲಿ ಇವೂ ಕಾಣಿಸಿಕೊಂಡಿಲ್ಲ. ಈ ಮೂರು ದಶಕಗಳಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ. ಇದನ್ನು ಮನಗಂಡು, ಕನ್ನಡ ಅಭಿವೃದ್ಧಿ ಪ್ರಾಧಿಕಾರ 'ಡಾ. ಸರೋಜಿನಿ ಮಹಿಷಿ ವರದಿಯನ್ನು ಪುನರ್ ಪರಿಶೀಲಿಸಲು ಸಮಿತಿ'ಯನ್ನು ರಚಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿತ್ತು. ಅದರಂತೆ ಸರ್ಕಾರ ಸಮಿತಿಯನ್ನು ರಚಿಸಿದೆ.

## ಪುನರ್ ಪರಿಶೀಲನಾ ಸಮಿತಿ

'ಸರ್ಕಾರಿ ಆದೇಶ ಸಂಖ್ಯೆ: ಕಸಂವಾ / ೨ ಕೆಒಎಲ್ ೨೦೧೬, ದಿನಾಂಕ: ೧೩.೬.೨೦೧೬' ಮೂಲಕ ಕೇಂದ್ರ ಹಾಗು ಖಾಸಗಿ ಸ್ವಾಮ್ಯದ ಉದ್ದಿಮೆ / ಸಂಸ್ಥೆ / ಕೈಗಾರಿಕೆ / ಕಚೇರಿಗಳ ಹಾಗು ಐಟಿ, ಬಿಟಿ ಸಂಸ್ಥೆಗಳನ್ನು ವರದಿಯ ಅಡಿಯಲ್ಲಿ ತರುವ ಅವಶ್ಯಕತೆಯಿರುವ ಹಿನ್ನೆಲೆಯಲ್ಲಿ ಈಗಿನ ಕಾಲಘಟ್ಟಕ್ಕೆ ತಕ್ಕಂತೆ ಡಾ. ಸರೋಜಿನಿ ಮಹಿಷಿ ವರದಿಯನ್ನು ಪುನರ್ ಪರಾಮರ್ಶಿಸಿ, ಸರ್ಕಾರಕ್ಕೆ ವರದಿ ಸಲ್ಲಿಸಲು ಈ ಕೆಳಕಂಡ ಸದಸ್ಯರನ್ನೊಳಗೊಂಡ ಸಮಿತಿಯನ್ನು ರಚಿಸಿ ಆದೇಶಿಸಿದೆ,

* **ಅಧ್ಯಕ್ಷರು,** ಕನ್ನಡ ಅಭಿವೃದ್ಧಿ ಪ್ರಾಧಿಕಾರ – ಅಧ್ಯಕ್ಷರು
* ಶ್ರೀ ಗೊ.ರು. ಚನ್ನಬಸಪ್ಪ – ಸದಸ್ಯರು
* ಡಾ.ಬಿ.ಎಲ್. ಶಂಕರ್ – ಸದಸ್ಯರು
* ಶ್ರೀಮತಿ ಹೇಮಲತಾ ಮಹಿಷಿ – ಸದಸ್ಯರು
* ಶ್ರೀ ರಾ.ನಂ. ಚಂದ್ರಶೇಖರ್ – ಸದಸ್ಯರು
* ಡಾ.ಕೆ. ಮುರಳಿಧರ – ಸದಸ್ಯ ಕಾರ್ಯದರ್ಶಿ

## ಮಹಿಷಿ ವರದಿ ಮಹತ್ವ

ಡಾ. ಸರೋಜಿನಿ ಮಹಿಷಿ ವರದಿಯು 'ಸ್ಥಳೀಯರಿಗೆ ಉದ್ಯೋಗ' ಎಂಬುದಕ್ಕೆ ತಾತ್ವಿಕ ನೆಲೆಯನ್ನು ಒದಗಿಸಿದ ರಾಷ್ಟ್ರದ ಪ್ರಮುಖ ದಾಖಲೆಗಳಲ್ಲಿ ಒಂದು. ಹಾಗೇ ಸ್ಥಳೀಯರು ಎಂದರೆ ಯಾರು ಎಂಬುದಕ್ಕೆ ಖಚಿತ ಮಾಪನವನ್ನು ಅಳವಡಿಸಿದ್ದು ರಾಷ್ಟ್ರದ ಗಮನ ಸೆಳೆಯಿತು. ಮಹಿಷಿ ವರದಿಯು ಸೂಚಿಸಿರುವ ಸ್ಥಳೀಯರು (ಅಂದರೆ ೧೫ ವರ್ಷ ನಿವಾಸಿ) ಮಾನದಂಡವನ್ನು ಹಲವು ರಾಜ್ಯಗಳು ಅಳವಡಿಸಿಕೊಂಡಿವೆ. ೫೮ ಅಂಶಗಳ ಈ ವರದಿಯು ಕೇವಲ ಕನ್ನಡಿಗರ ಉದ್ಯೋಗ ವಿಚಾರಕ್ಕೆ ಸೀಮಿತವಾಗಿಲ್ಲ. ರೈತರು ನೀರಾವರಿ ಜಮೀನನ್ನು ಪರಪ್ರಾಂತದವರಿಗೆ ಪರಭಾರೆ ಮಾಡುವುದನ್ನು ನಿರ್ಬಂಧಿಸುವುದು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಸೇರಿದಂತೆ ನಗರಾಭಿವೃದ್ಧಿ ಮಂಡಳಿಗಳು ನಿರ್ಮಿಸುವ ನಿವೇಶನ, ಮನೆಗಳನ್ನು ಅನ್ಯಪ್ರಾಂತೀಯರು ಪಡೆಯುವುದನ್ನು ತಡೆಯುವುದು, ರೈಲ್ವೆ ಪ್ರತ್ಯೇಕ ವಲಯ, ವೃತ್ತಿಪರ ಶಿಕ್ಷಣ ಕೋರ್ಸ್‌ಗಳನ್ನು ಹೆಚ್ಚು ಉಪಯುಕ್ತವಾಗಿಸುವುದೂ ಸೇರಿದಂತೆ ಹಲವು ಮಹತ್ವದ ಅಂಶಗಳು ವರದಿಯಲ್ಲಿವೆ.

## ಮಹಿಷಿ ವರದಿಯ ಸಂಕೀರ್ಣತೆ

ಮೇಲ್ನೋಟಕ್ಕೆ ಮಹಿಷಿ ವರದಿಯನ್ನು ರಾಜ್ಯ ಸರ್ಕಾರ ಅನುಷ್ಠಾನ ಗೊಳಿಸಬಹುದು ಅನ್ನುವ ಅಭಿಪ್ರಾಯ ಮೂಡುತ್ತದೆ. ಸೂಕ್ಷ್ಮವಾಗಿ ಗಮನಿಸಿದರೆ ವರದಿ ಜಾರಿಗೆ ಬರಬೇಕಾದರೆ ಕೇಂದ್ರ ಸರ್ಕಾರ ಮನಸ್ಸು ಮಾಡಬೇಕು. ಈ ವರದಿಯು ಕೇಂದ್ರ ಸರ್ಕಾರವು ಒಪ್ಪದಿರುವ 'ರಾಷ್ಟ್ರೀಯ ಐಕ್ಯತಾ ಪರಿಷತ್ತಿನ ಉಪಸಮಿತಿಯು ೧೯೬೮ರಲ್ಲಿ ನೀಡಿದ ವರದಿಯನ್ನು ಆಧಾರವಾಗಿಟ್ಟುಕೊಂಡಿದೆ. ಅದನ್ನು ಮಹಿಷಿ ವರದಿ ಆರಂಭದಲ್ಲೇ ಹೀಗೆ ದಾಖಲಿಸಿದೆ : **'ಅರ್ಹತೆಯುಳ್ಳ ಸ್ಥಳೀಯ ಅಭ್ಯರ್ಥಿಗಳು ಲಭ್ಯವಿರುವಾಗ ಉದ್ಯೋಗಾವಕಾಶದಲ್ಲಿ ಅವರಿಗೆ ಹೆಚ್ಚಿನ ಭಾಗ ದೊರಕಿಸುವಂತೆ ಮಾಡಿರುವುದು. ಈ ಶಿಫಾರಸ್ಸನ್ನು ರಾಷ್ಟ್ರೀಯ ಐಕ್ಯತಾ ಪರಿಷತ್ತು ೨೨, ಜೂನ್ ೧೯೬೮ರಂದು**

**ನಡೆದ ಸಭೆಯಲ್ಲಿ ಅಂಗೀಕರಿಸಿತ್ತು. ಈ ಶಿಫಾರಸ್ಸಿನ ಮೇಲೆ ಕೇಂದ್ರ ಸರ್ಕಾರವು ಯಾವ ಕ್ರಮವನ್ನೂ ತೆಗೆದುಕೊಂಡಂತೆ ಕಾಣುವುದಿಲ್ಲ. ಡಾ. ಸರೋಜಿನಿ ಮಹಿಷಿ ಸಮಿತಿಯು ಮಾಡುವ ಶಿಫಾರಸ್ಸುಗಳು, ಪರಿಷತ್ತಿನ ಶಿಫಾರಸ್ಸಿಗೆ ಅನುಗುಣವಾಗಿರುವುವು. ಆದುದರಿಂದ ಡಾ. ಸರೋಜಿನಿ ಮಹಿಷಿ ಸಮಿತಿಯ ಸಲಹೆಗಳನ್ನು ಕಾರ್ಯರೂಪಕ್ಕೆ ತರುವುದರ ಮೂಲಕ ರಾಷ್ಟ್ರೀಯ ಐಕ್ಯತಾ ಪರಿಷತ್ತಿನ ಶಿಫಾರಸ್ಸುಗಳನ್ನು ಕಾರ್ಯರೂಪಕ್ಕೆ ತರುವಂತೆ ರಾಜ್ಯ ಸರ್ಕಾರವು ನೋಡಿಕೊಳ್ಳಬೇಕು ಹಾಗು ಕೇಂದ್ರ ಸರ್ಕಾರವನ್ನು ಕೇಳಿಕೊಳ್ಳಬೇಕು'** *(ಪು.೧೩)*

ಮಹಿಷಿ ವರದಿಯಲ್ಲಿರುವ ಇನ್ನೊಂದು ದಾಖಲೆ ೧೯೮೪ರ 'ಬ್ಯೂರೋ ಆಫ್ ಪಬ್ಲಿಕ್ ಎಂಟರ್‌ಪ್ರೈಸಸ್'ನ ಮಾರ್ಗಸೂಚಿ. ಈ ಆದೇಶದನ್ವಯ ಕೇಂದ್ರ ಸರ್ಕಾರಿ ವಲಯದ ಉದ್ಯಮಗಳಲ್ಲಿ ವೇತನ ಶ್ರೇಣಿ ೧೨೫೦ರೂ.ವರೆಗೆ ಇರುವ ಎಲ್ಲ ಹುದ್ದೆಗಳನ್ನು ತುಂಬಲು ಉದ್ಯೋಗ ವಿನಿಮಯ ಕೇಂದ್ರಗಳ ಮೂಲಕವೇ ಅಭ್ಯರ್ಥಿಗಳ ಪಟ್ಟಿ ತರಿಸಿಕೊಂಡು ತುಂಬಬೇಕು. ೧೯೮೪ರ ನಂತರ ಹಲವು ಬಾರಿ ವೇತನ ಪರಿಷ್ಕರಣ ಆಗಿದೆ. ಆದರೆ, ಈ ಆದೇಶಕ್ಕೆ ತಿದ್ದುಪಡಿ ಆಗಿಲ್ಲ. ಈಗ ಉದ್ಯೋಗ ವಿನಿಮಯ ಕೇಂದ್ರಗಳು ನೇಪಥ್ಯಕ್ಕೆ ಸರಿದಿವೆ. ಕೇಂದ್ರ ಸರ್ಕಾರದ ಉದ್ಯೋಗ, ಸಾರ್ವಜನಿಕ ಕುಂದುಕೊರತೆ ಮತ್ತು ಪಿಂಚಣಿ ಸಚಿವಾಲಯ [No. ೧೪೦೨೪ / ೧ / ೨೦೦೪– EST (D)] ಒಂದು ಸುತ್ತೋಲೆ ಹೊರಡಿಸಿದೆ (ಅನುಬಂಧದಲ್ಲಿದೆ). ಈ ಸುತ್ತೋಲೆ ಹುದ್ದೆಗಳನ್ನು ತುಂಬುವುದಾಗಿ ರಾಷ್ಟ್ರಮಟ್ಟದಲ್ಲಿ ವ್ಯಾಪಕ ಪ್ರಚಾರ ನೀಡಬೇಕು. ಎಲ್ಲ ಮೂಲಗಳಿಂದ ಬಂದ ಎಲ್ಲಾ ಅರ್ಜಿಗಳನ್ನು ಪರಿಗಣಿಸಬೇಕು ಎಂದಿದೆ. ಇದಲ್ಲದೆ ಸೂಚಿಸಿರುವ ಹಲವು ಅಂಶಗಳು ಕೇಂದ್ರ ಸರ್ಕಾರವೇ ಅನುಷ್ಠಾನಗೊಳಿಸಬೇಕು. ಸಂವಿಧಾನದ ಅನುಚ್ಛೇದಕ್ಕೆ–೧೬ಕ್ಕೆ ತಿದ್ದುಪಡಿ ತರಬೇಕಾಗುತ್ತದೆ. ತಂದರೂ ಅದು ೫ ವರ್ಷಕ್ಕೆ ಸೀಮಿತ. ಒಟ್ಟಾರೆಯಾಗಿ ಮಹಿಷಿ ವರದಿ ಜಾರಿಗೆ ಬರಬೇಕಾದರೆ ಸಂವಿಧಾನಕ್ಕೆ ನಾಲ್ಕು ತಿದ್ದುಪಡಿ ತರಬೇಕು. ೧೯೮೪ರ ಆದೇಶವನ್ನು ಬದಲಿಸಬೇಕು. ಈ ಸಂಗತಿಗಳನ್ನು ಗಮನಿಸಿದರೆ ಮಹಿಷಿ ವರದಿ ಜಾರಿಯಲ್ಲಿ ಕೇಂದ್ರ ಸರ್ಕಾರದ ಪಾತ್ರ, ರಾಜ್ಯ ಸರ್ಕಾರಕ್ಕಿಂತಲೂ ಹೆಚ್ಚಿದೆ ಎಂಬುದು ಅರಿವಿಗೆ ಬರುತ್ತದೆ. ವರದಿ ಬಂದು ಮೂರ ದಶಕಗಳಾಗಿವೆ. ಇಲ್ಲಿಯವರೆಗೆ ರಾಜ್ಯ ಸರ್ಕಾರ ಈ ವರದಿಯ ಬಗ್ಗೆ ಕೇಂದ್ರ ಸರ್ಕಾರದೊಡನೆ ವ್ಯವಹರಿಸಿರುವುದಕ್ಕೆ ದಾಖಲೆಗಳಿಲ್ಲ. **'ಮಹಿಷಿ ವರದಿಗೆ ಶಾಸನಾಧಾರ ಬೆಂಬಲವಿಲ್ಲದಿರುವುದರಿಂದ ಅದೊಂದು ಸಮಿತಿಯ ವರದಿ, ಅದನ್ನು ಅನುಸರಿಸಿ ಎಂದು ಹೇಳುವಂತಿಲ್ಲ'** ಎಂದು ಕರ್ನಾಟಕ ಉಚ್ಚನ್ಯಾಯಾಲಯ ದಾವೆಯನ್ನು ತಿರಸ್ಕರಿಸಿದೆ. **[W.A. No. 30179/2013 (S-RES)]**



ಇಲ್ಲಿ ಪ್ರಸ್ತಾಪಿಸಿರುವ ಸಂಗತಿಗಳನ್ನು ಗಮನಿಸಿ ಇಡೀ ವರದಿ ನಿರುಪಯುಕ್ತ ಎನ್ನುವ ತೀರ್ಮಾನಕ್ಕೆ ಬರಲಾಗದು. ಯಾವುದೇ ವರದಿ, ಕಾನೂನು ಎಲ್ಲ ಕಾಲಕ್ಕೂ ಸಲ್ಲುವಂತಿರುವುದಿಲ್ಲ. ಡಾ. ಸರೋಜಿನಿ ಮಹಿಷಿ ಸಮಿತಿಯು ವರದಿ ನೀಡಿದಾಗ ಸರ್ಕಾರಿ ವಲಯದ ಉದ್ಯಮಗಳಲ್ಲೇ ಹೆಚ್ಚು ಉದ್ಯೋಗ ಸೃಷ್ಟಿ ಆಗುತ್ತಿತ್ತು. ಈಗ ಜಾಗತೀಕರಣದ ಪರಿಣಾಮ ಸರ್ಕಾರಿ ವಲಯ ಹಿನ್ನೆಲೆಗೆ ಸರಿದು ಖಾಸಗಿ ಉದ್ಯಮಗಳು, ಬಹುರಾಷ್ಟ್ರೀಯ ಉದ್ಯಮಗಳು ಮುನ್ನೆಲೆಗೆ ಬಂದಿವೆ. ಈ ಬದಲಾದ ಸನ್ನಿವೇಶಕ್ಕೆ ಮಹಿಷಿ ವರದಿಯನ್ನು ಪ್ರಸ್ತುತಗೊಳಿಸಲು ಕಾರ್ಯಸಾಧುವಾಗುವ ನೆಲೆಯಲ್ಲಿ ಪರಿಶೀಲಿಸುವ ಅಗತ್ಯವಿದೆ. ಮೂಲವರದಿಯ ಆಶಯವನ್ನು ಆಗು ಮಾಡಲು ಇನ್ನಷ್ಟು ಅಂಶಗಳು ಸೇರಬೇಕಿದೆ.

## ಮಹಿಷಿ ವರದಿಯ ವಿಶ್ಲೇಷಣೆ

ಮಹಿಷಿ ವರದಿ ಪುನರ್ ಪರಿಶೀಲನೆಗಾಗಿ ನಡೆದ ಸಭೆಯಲ್ಲಿ ವರದಿಯನ್ನು ಪ್ರಸ್ತುತಗೊಳಿಸುವುದು, ಕಾನೂನಿನ ರಕ್ಷಣೆ ಹಾಗು ರಾಜ್ಯ ಪ್ರಗತಿ, ಈ ಎಲ್ಲ ದೃಷ್ಟಿಗಳಿಂದ ವಿವರವಾಗಿ ಪರಿಶೀಲಿಸಿ, ವರದಿಯನ್ನು ಕೆಳಕಾಣಿಸಿರುವಂತೆ ವಿಂಗಡಿಸಲು ತೀರ್ಮಾನವಾಯಿತು.

೧. **ರಾಜ್ಯ ಸರ್ಕಾರ ನೇರವಾಗಿ ಅನುಷ್ಠಾನಗೊಳಿಸಬಹುದಾದ ಅಂಶಗಳು**

೨. **ಕೇಂದ್ರ ಸರ್ಕಾರ ಅನುಷ್ಠಾನಗೊಳಿಸಬೇಕಿರುವ ಅಂಶಗಳು**

೩. **ಈಗಾಗಲೇ ಅನುಷ್ಠಾನವಾಗಿರುವ ಸಲಹೆಗಳು**

೪. **ಇಂದಿನ ಕಾಲಮಾನಕ್ಕೆ ಹೊಂದುವಂತೆ ಬದಲಿಸಬೇಕಿರುವ ಅಂಶಗಳು**

೫. **ಕೈ ಬಿಡಬಹುದಾದ ಅಂಶಗಳು**

* ಈ ವಿವರಗಳು ಅನುಬಂಧ–೨ರಲ್ಲಿದೆ.

ಡಾ. ಸರೋಜಿನಿ ಮಹಿಷಿ ವರದಿಯನ್ನು ಸೂಕ್ಷ್ಮವಾಗಿ ಪರಿಶೀಲಿಸಿದ ನಂತರ, ಬೇರೆ ರಾಜ್ಯಗಳಲ್ಲಿ 'ಸ್ಥಳೀಯರಿಗೆ ಉದ್ಯೋಗ'ದ ವಿಚಾರವಾಗಿ ಏನಿದೆ? ಎಂಬ ಸಂಗತಿಗಳನ್ನು ಗಮನಿಸಿ (ಅನುಬಂಧ–೩ರಲ್ಲಿ ವಿವರ ಇದೆ) ಸಮಿತಿಯು ಹಲವು ಮೂಲಗಳಿಂದ ಅದನ್ನು ಖಚಿತಪಡಿಸಿಕೊಂಡು, ಸ್ಥಳೀಯರಿಗೆ ಉದ್ಯೋಗದಲ್ಲಿ ನ್ಯಾಯಯುತ ಪಾಲು ಸಿಗುವಂತಾಗಲು ರಾಜ್ಯ ಸರ್ಕಾರ ತೆಗೆದುಕೊಳ್ಳಬೇಕಾದ ಕ್ರಮ ಮತ್ತು ಕೇಂದ್ರ ಸರ್ಕಾರದಿಂದ ಆಗಬೇಕಾಗಿರುವ ಕ್ರಮವನ್ನು 'ಸಮರ್ಥನೀಯ ಮಾಹಿತಿ'ಯೊಂದಿಗೆ ಈ ಪರಿಷ್ಕೃತ ವರದಿಯನ್ನು ಸಲ್ಲಿಸಲಾಗುತ್ತಿದೆ. ರಾಜ್ಯ ಸರ್ಕಾರ ಒಂದು ಕಾಲ ಮಿತಿಯಲ್ಲಿ ಈ ವರದಿಯು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ಬರಲು ಮತ್ತು ಕೇಂದ್ರ ಸರ್ಕಾರ ಕ್ರಮ ಕೈಗೊಳ್ಳಬೇಕಿರುವ ಅಂಶಗಳನ್ನು ನೇರವಾಗಿ ಕೇಂದ್ರ ಸರ್ಕಾರಕ್ಕೆ ಒಪ್ಪಿಸಿ ಅದನ್ನು ಶಾಸನಬದ್ಧಗೊಳಿಸಲು ಒತ್ತಾಯಿಸಬೇಕೆಂದು ಮನವಿ ಮಾಡುತ್ತೇವೆ.

ಮೇಲೆ ತಿಳಿಸಿರುವ ಎಲ್ಲಾ ಅಂಶಗಳನ್ನು ಪರಿಶೀಲಿಸಿದ ನಂತರ ಪರಿಷ್ಕರಿಸಿದ ವರದಿಯಲ್ಲಿ **ಕಾಯ್ದೆ ಮಾಡಲು ಅಗತ್ಯವಿರುವ ೧೪ ಅಂಶಗಳನ್ನು ಪಟ್ಟಿಮಾಡಿ ಘನಸರ್ಕಾರದ ಅವಗಾಹನೆಗೆ ಸಲ್ಲಿಸುತ್ತಿದ್ದೇವೆ** ಮತ್ತು ಅನುಷ್ಠಾನಕ್ಕೆ ಸಹಕಾರಿಯಾಗುವಂತೆ ಕಾಯ್ದೆ ಮಾಡುವ ಸೂಕ್ತ ಕ್ರಮಕ್ಕಾಗಿ ಒತ್ತಾಯಪೂರ್ವಕ ಮನವಿ ಮಾಡುತ್ತಿದ್ದೇವೆ.

**ಧನ್ಯವಾದಗಳೊಂದಿಗೆ**



**ಎಸ್.ಜಿ. ಸಿದ್ಧರಾಮಯ್ಯ**
ಅಧ್ಯಕ್ಷರು
ಕನ್ನಡ ಅಭಿವೃದ್ಧಿ ಪ್ರಾಧಿಕಾರ

ಸ್ಥಳ : ಬೆಂಗಳೂರು
ದಿನಾಂಕ : ೦೧ ಫೆಬ್ರವರಿ ೨೦೧೭

---

ವಿಶೇಷ ನೆನಪು : ಆದೇಶ ಸಂಖ್ಯೆ ಕಸಂವಾ/೨ ಕೆಓಎಲ್ ೨೦೧೬, ದಿನಾಂಕ: ೧೩.೬.೨೦೧೬ ರಂತೆ ಪರಿಷ್ಕರಣಾ ಸಮಿತಿಯನ್ನು ಸರ್ಕಾರ ರಚಿಸಿತು. ಆ ಸಮಿತಿಯಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ಡಾ.ಎಲ್. ಹನುಮಂತಯ್ಯನವರು ನೇಮಕವಾಗಿದ್ದರು.

# ರಾಜ್ಯ ಸರ್ಕಾರ ಅನುಷ್ಠಾನಗೊಳಿಸಲು ಸಲಹೆ ಮಾಡಿರುವ ಅಂಶಗಳು

**೧. ಎಲ್ಲ ಖಾಸಗಿ ವಲಯದ [ಐಟಿ, ಬಿಟಿ, ಬಹುರಾಷ್ಟ್ರೀಯ ಸಂಸ್ಥೆಗಳು, ವ್ಯಾಪಾರ ವಾಣಿಜ್ಯ, ರೆಸಾರ್ಟ್, ಆಸ್ಪತ್ರೆ, ಮನರಂಜನಾ ಕೇಂದ್ರ, ಹೋಟೆಲ್ ಉದ್ಯಮ, ಸಾರಿಗೆ, ಪ್ರವಾಸೋದ್ಯಮ, ನವೋದ್ಯಮ (start ups), ಇ–ಕಾಮರ್ಸ್, ಶಿಕ್ಷಣ ಸಂಸ್ಥೆ, ವಿಶ್ವವಿದ್ಯಾಲಯ, ಇತ್ಯಾದಿಗಳನ್ನೊಳಗೊಂಡಂತೆ] ಉದ್ಯಮಗಳಿಗೆ ರಾಜ್ಯ ಸರ್ಕಾರ ಹಲವು ಮೂಲಭೂತ [ನೆಲ, ಜಲ, ವಿದ್ಯುತ್, ರಸ್ತೆ, ತೆರಿಗೆ ರಜೆ ಇತ್ಯಾದಿ] ಸವಲತ್ತುಗಳನ್ನು ನೀಡುತ್ತಿರುವುದರಿಂದ ಮಹಿಷಿ ವರದಿ ಅನ್ವಯ 'ಸಿ' ಮತ್ತು 'ಡಿ' ವರ್ಗದ ಹುದ್ದೆಗಳಿಗೆ ನೂರಕ್ಕೆ ನೂರರಷ್ಟು ಕನ್ನಡಿಗರನ್ನೇ ನೇಮಕ ಮಾಡಿಕೊಳ್ಳುವ ಬಗ್ಗೆ ಕರಾರು ಪತ್ರದಲ್ಲೇ ಪೂರ್ವಷರತ್ತು ಹಾಕಬೇಕು. ಉನ್ನತ ಹುದ್ದೆಗಳಲ್ಲಿ ಕನ್ನಡಿಗರಿಗೆ ೮೦%ರಷ್ಟು ಉದ್ಯೋಗಗಳು ಸ್ಥಳೀಯರಿಗೆ ನೀಡಬೇಕು. ರಾಜ್ಯದಲ್ಲಿರುವ ತಾಂತ್ರಿಕ ಕಾಲೇಜುಗಳಲ್ಲಿಯೇ ಕ್ಯಾಂಪಸ್ ಆಯ್ಕೆ ಮಾಡಲು ಸೂಚಿಸಬೇಕು. ಈ ಆದೇಶ ಪಾಲನೆಯಾಗುತ್ತಿದೆಯೇ ಎಂಬುದನ್ನು ಸಂಬಂಧಪಟ್ಟ ಮಾಹಿತಿ ತಂತ್ರಜ್ಞಾನ/ಕಾರ್ಮಿಕ ಇಲಾಖೆಗಳು ಪರಿಶೀಲಿಸಬೇಕು. ಸದರಿ ಇಲಾಖೆಗಳು ನೀಡುವ ಮಾಹಿತಿಗಳ ಪರಾಮರ್ಶೆಯನ್ನು ನಡೆಸುವ, ಲೋಪವಿದ್ದಲ್ಲಿ ಸಂಬಂಧಪಟ್ಟ ಉದ್ಯಮ, ಸಂಸ್ಥೆ ಅಥವಾ ಇಲಾಖೆಗಳ ಮೇಲೆ ಶಿಸ್ತುಕ್ರಮವನ್ನು ಕೈಗೊಳ್ಳುವ ಅಧಿಕಾರವನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ನೀಡಬೇಕು.**

*(ಮೂಲ ಮಹಿಷಿ ವರದಿ ಸಲಹೆ ಸಂಖ್ಯೆ –೪)*

ಡಾ. ಸರೋಜಿನಿ ಮಹಿಷಿಯವರು ವರದಿ ನೀಡಿದಾಗ ಐಟಿ/ಬಿಟಿ, ಬಹುರಾಷ್ಟ್ರೀಯ ಸಂಸ್ಥೆಗಳು ಇತ್ಯಾದಿ ಇತ್ಯಾದಿ ಗಳಿರಲಿಲ್ಲ. ಹಾಗಾಗಿ ಮಹಿಷಿ ವರದಿಯಲ್ಲಿ ಸೇರಿಲ್ಲ. ಇದನ್ನು ಗಮನಿಸಿ ಕೈಗಾರಿಕಾ ನೀತಿ–೨೦೧೪–೧೯ರಲ್ಲಿ ಕೆಳಗಿನಂತೆ ಸೇರಿಸಿದೆ. ಮಹಾರಾಷ್ಟ್ರದಲ್ಲೂ ಇಂತಹ ಕಾನೂನು ಇದೆ.

i. ಹೊಸದಾಗಿ ಕೈಗಾರಿಕಾ ಬಂಡವಾಳ ಹೂಡಿಕೆಯಾಗುವ ಎಲ್ಲಾ ಉದ್ಯಮಗಳು ಅತ್ಯಧಿಕ ಹೆಚ್ಚುವರಿ ಉದ್ಯೋಗಾವಖಾಶಗಳನ್ನು ಸೃಷ್ಟಿಸಿ, ಒಟ್ಟು ಉದ್ಯೋಗದ ಆಧಾರದ ಮೇಲೆ ಕನ್ನಡಿಗರಿಗೆ ಶೇಕಡ ೭೦% ರಷ್ಟನ್ನು ನೀಡಬೇಕು ಹಾಗೂ ಗುಂಪು–ಡಿ ಯಲ್ಲಿ ಶೇಕಡ ೧೦೦ರಷ್ಟು ಒದಗಿಸಬೇಕು.

*(ಕರ್ನಾಟಕ ಕೈಗಾರಿಕಾ ನೀತಿ–೨೦೧೪–೧೯ ಪುಟ. ೭೭)*

(All new industrial investment projects shall endeavor to create maximum possible additional direct employment opportunities with a minimum employment of 70% to Kannadigas on an overall basis and 100% in case of Group D employees.' *Industrial Policy 2014-19 - Page 77)*

ii. Government of Maharashtra Industry, Energy & Labour Department, G.R.No. ELP-2008 / C.No.93 / Ind-6, Date: 17th November, 2008.

Government of Maharashtra has a policy in place to ensure that local persons of the State get their due share in gainful employment arising from the growth in industrial activity. Accordingly, all industrial enterprises are expected to ensure that 50% of all supervisory staff, and 80% of all employees (including supervisory staff) are local persons, and also that the Head of the Human Resources / In charge of the recruitment is a person with knowledge of Marathi. While encouraging that the maximum number



**೨. ರಾಜ್ಯದಲ್ಲಿ ವ್ಯವಹರಿಸುವ ಎಲ್ಲಾ ಬ್ಯಾಂಕುಗಳು [ಬಹುರಾಷ್ಟ್ರೀಯ/ ಖಾಸಗಿ ಬ್ಯಾಂಕುಗಳನ್ನೊಳಗೊಂಡಂತೆ] ಗುಮಾಸ್ತರ ಹುದ್ದೆಗೆ ಅಭ್ಯರ್ಥಿ ಗಳನ್ನು ಆಯ್ಕೆ ಮಾಡಿಕೊಳ್ಳುವ ಸಂದರ್ಭದಲ್ಲಿ ರಾಜ್ಯದ ಅಧಿಕೃತ ರಾಜ್ಯಭಾಷೆಯಾದ ಕನ್ನಡ ಭಾಷಾಜ್ಞಾನವನ್ನು ಕಡ್ಡಾಯಗೊಳಿಸಬೇಕು. ೧೦ನೇ ತರಗತಿಯಲ್ಲಿ ರಾಜ್ಯಭಾಷೆಯನ್ನು ಒಂದು ಭಾಷೆಯಾಗಿ ವ್ಯಾಸಂಗ ಮಾಡಿ ಉತ್ತೀರ್ಣ ರಾದವರನ್ನು ಬಿಟ್ಟು ಉಳಿದ ಅಭ್ಯರ್ಥಿಗಳು ಕಡ್ಡಾಯವಾಗಿ ರಾಜ್ಯಭಾಷಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಲೇಬೇಕು.**

*(ಮೂಲ ಮಹಿಷಿ ವರದಿ ಸಲಹೆ ಸಂಖ್ಯೆ –೧೬)*

ಭಾರತೀಯ ಸ್ಟೇಟ್ ಬ್ಯಾಂಕ್ ಗುಮಾಸ್ತರ ಹುದ್ದೆಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಳ್ಳುವ ಸಂದರ್ಭದಲ್ಲಿ ರಾಜ್ಯದ ಅಧಿಕೃತ ಭಾಷಾ ಜ್ಞಾನವನ್ನು ಕಡ್ಡಾಯಗೊಳಿಸಿದೆ. ೧೦ನೆಯ ತರಗತಿಯಲ್ಲಿ ರಾಜ್ಯ ಭಾಷೆಯಲ್ಲಿ ಉತ್ತೀರ್ಣರಾದವರನ್ನು ಬಿಟ್ಟು ಉಳಿದ ಅಭ್ಯರ್ಥಿಗಳು ಕಡ್ಡಾಯವಾಗಿ ಭಾಷಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಲೇಬೇಕು ಇಲ್ಲವಾದರೆ ಆಯ್ಕೆಯಿಂದ ಅನರ್ಹಗೊಳಿಸಲಾಗುತ್ತದೆ ಎಂಬಂಶ ಅಧಿಸೂಚನೆಯಲ್ಲಿದೆ.

[Test of knowledge of official and / or local language: Those who produce 10th standard mark sheet / certificate evidencing having studied official(local) language will not be subjected to any Language test. In case of others, language test will be conducted at the time of intrview( if intrview is held) / before final selection(if intrview is not held). Candidates not found to beproficient in official and / or local language would be disqualified.] **Adv no. CRPD/CR/2016-17/01.**

**೩. ರಾಜ್ಯದಲ್ಲಿನ ಸರ್ಕಾರಿ ವಲಯದ ಉದ್ಯಮಗಳಲ್ಲಿ ಎಲ್ಲ ಹುದ್ದೆಗಳಿಗೂ ಕನ್ನಡಿಗರನ್ನೇ ಆಯ್ಕೆ ಮಾಡಬೇಕು. ಅನಿವಾರ್ಯ ಸಂದರ್ಭಗಳಲ್ಲಿ ಹೊರ ರಾಜ್ಯದವರನ್ನು ನೇಮಕ ಮಾಡಿಕೊಳ್ಳ ಬೇಕಾದರೆ ರಾಜ್ಯ ಸರ್ಕಾರದ ಪೂರ್ವಾನುಮತಿ ಪಡೆದು ನೇಮಕ ಮಾಡಿಕೊಳ್ಳಬೇಕು.**

*(ಮೂಲ ಮಹಿಷಿ ವರದಿ ಸಲಹೆ ಸಂಖ್ಯೆ –೩)*

“ರಾಜ್ಯ ಸರ್ಕಾರಿ ವಲಯದ ಉದ್ಯಮಗಳಲ್ಲಿ ಉನ್ನತ ಮಟ್ಟದ ತಾಂತ್ರಿಕ ಅರ್ಹತೆಯುಳ್ಳ ಅಭ್ಯರ್ಥಿಗಳು ದೊರಯದೇ ಇರುವ ಹುದ್ದೆಗಳನ್ನು ಬಿಟ್ಟು ಇನ್ನುಳಿದ ಹುದ್ದೆಗಳಿಗೆ ಕನ್ನಡಿಗರನ್ನೇ ನೇಮಿಸಬೇಕು. ಈ ನೀತಿಯ ಪರಿಪಾಲನೆ ಬಗ್ಗೆ ಕೈಗಾರಿಕಾ ಇಲಾಖೆ ಎಚ್ಚರ ವಹಿಸಬೇಕು”ಎಂದು ಮಹಿಷಿ ವರದಿಯಲ್ಲಿದೆ. ಇದು ಸರಿಯಾಗಿ ಪಾಲನೆಯಾಗಿಲ್ಲ ಎಂಬ ಅಭಿಪ್ರಾಯ ಇರುವುದರಿಂದ ಖಚಿತತೆ ದೃಷ್ಟಿಯಿಂದ ಈ ಶಿಫಾರಸನ್ನು ಮಾಡಲಾಗಿದೆ.

೪. **ಅಪ್ರೆಂಟಿಸ್‌ಗಳ ಆಯ್ಕೆಯನ್ನು ತಾಂತ್ರಿಕ ಇಲಾಖೆ ಮಾಡುತ್ತಿದ್ದು, ಅಲ್ಲಿ ಹೊರರಾಜ್ಯದ ಅಭ್ಯರ್ಥಿಗಳು ಬರುತ್ತಿದ್ದಾರೆ. ಅದನ್ನು ತಡೆಯಲು ರಾಜ್ಯದಲ್ಲೇ ಎಸ್.ಎಸ್.ಎಲ್.ಸಿ.ವರೆಗೆ ಓದಿದವರನ್ನು ಮಾತ್ರ ಪರಿಗಣಿಸಬೇಕು.**

*(ಮೂಲ ಮಹಿಷಿ ವರದಿ ಸಲಹೆ ಸಂಖ್ಯೆ –೫)*

ಮಹಿಷಿ ವರದಿಯಂತೆ (ಅಂಶ–೫) ಉದ್ಯಮಗಳಲ್ಲಿ ಅಪ್ರೆಂಟಿಸ್‌ಗಳನ್ನು ನೇಮಕ ಮಾಡುವಾಗ ಉದ್ಯೋಗ ವಿನಮಯ ಕೇಂದ್ರಗಳ ಮೂಲಕ ಆಯ್ಕೆ ಮಾಡಲಾಗುತ್ತಿತ್ತು. ಈಗ ಉದ್ಯೋಗ ವಿನಿಮಯ ಕೇಂದ್ರ ನೇಪಥ್ಯಕ್ಕೆ ಸರಿದಿರುವುದರಿಂದ ನೇರವಾಗಿ ತಾಂತ್ರಿಕ/ಕೆಲವು ಸಂದರ್ಭಗಲ್ಲಿ ಉದ್ಯಮಗಳೇ ಆಯ್ಕೆ ಮಾಡುತ್ತಿದೆ.

೫. **ರಾಜ್ಯ/ಕೇಂದ್ರ ಸರ್ಕಾರಿ ಉದ್ಯಮಗಳು ಹಾಗು ಇಲಾಖೆಗಳಲ್ಲಿ ದಿನಗೂಲಿ ಕೆಲಸಗಳಿಗೆ ಕಾರ್ಮಿಕರನ್ನು/ನೌಕರರನ್ನು ಗುತ್ತಿಗೆ ಆಧಾರದ ಮೇಲೆ ತೆಗೆದುಕೊಳ್ಳುವ ಸಂದರ್ಭದಲ್ಲಿ ಕಡ್ಡಾಯವಾಗಿ ಕನ್ನಡಿಗರನ್ನೇ ನೇಮಿಸಿ ಕೊಳ್ಳಬೇಕು. ಹೊರಗುತ್ತಿಗೆಯ ಸಂಸ್ಥೆಗಳಿಗೂ ಈ ಷರತ್ತು ವಿಧಿಸಬೇಕು. ಈ ಆದೇಶ ಪಾಲನೆಯಾಗುತ್ತಿದೆಯೇ ಎಂಬುದನ್ನು ಪರಿಶೀಲಿಸಿ ಸೂಕ್ತಕ್ರಮ ಕೈಗೊಳ್ಳುವ ಅಧಿಕಾರವನ್ನು ಕಾರ್ಮಿಕ ಇಲಾಖೆಗೆ ನೀಡಬೇಕು. ಸದರಿ ಮಾಹಿತಿಯನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ನಿಯಮಿತವಾಗಿ ಸಲ್ಲಿಸಬೇಕು.** *(ಹೊಸ ಸಲಹೆ)*

ಈಗ ಖಾಯಂ ನೇಮಕಾತಿ ನಡೆಯುತ್ತಿಲ್ಲ. ಎಷ್ಟೋ ಉದ್ಯಮ/ಕಚೇರಿಗಳಲ್ಲಿ ಖಾಯಂ ನೌಕರರಿಗಿಂತ ಗುತ್ತಿಗೆ/ಹೊರಗುತ್ತಿಗೆ ಉದ್ಯೋಗಿಗಳೇ ಹೆಚ್ಚಿದ್ದಾರೆ.



ಇಂತಹ ತಾತ್ಕಾಲಿಕ ನೇಮಕಾತಿ ಬಗ್ಗೆ ಸರ್ಕಾರ ಯಾವುದೇ ಮಾರ್ಗ ಸೂಚಿಯಾಗಲಿ, ಆದೇಶವಾಗಲಿ, ನಿಯಂತ್ರಣವಾಗಲಿ ಇಲ್ಲ. ಇದರಿಂದ ಹೊರ ರಾಜ್ಯದವರು ಬರುತ್ತಿದ್ದಾರೆ.

೬. **ರಾಜ್ಯದಲ್ಲಿರುವ ಯಾವುದೇ ಉದ್ಯಮ/ಸಂಸ್ಥೆಗಳಲ್ಲಿ ನೌಕರರ ಪ್ರಮಾಣ ನೂರಕ್ಕೂ ಹೆಚ್ಚಿದ್ದಾಗ ಆ ಸಂಸ್ಥೆಯ ನೇಮಕಾತಿ ಆಯ್ಕೆ ಸಮಿತಿಯಲ್ಲಿ ರಾಜ್ಯ ಸರ್ಕಾರದ ಕನ್ನಡ ಪ್ರತಿನಿಧಿ ಕಡ್ಡಾಯವಾಗಿ ಇರಬೇಕು. ಈ ಆದೇಶ ಪಾಲನೆಯಾಗುತ್ತಿದೆಯೇ ಎಂಬುದನ್ನು ಪರಿಶೀಲಿಸಿ ಸೂಕ್ತಕ್ರಮ ಕೈಗೊಳ್ಳುವ ಅಧಿಕಾರವನ್ನು ಕಾರ್ಮಿಕ ಇಲಾಖೆಗೆ ನೀಡಬೇಕು. ಸದರಿ ಇಲಾಖೆಗಳು ನೀಡುವ ಮಾಹಿತಿಗಳ ಪರಾಮರ್ಶೆಯನ್ನು ನಡೆಸುವ, ಲೋಪವಿದ್ದಲ್ಲಿ ಸಂಬಂಧ ಪಟ್ಟ ಉದ್ಯಮಗಳ ಮೇಲೆ ಶಿಸ್ತುಕ್ರಮವನ್ನು ಕೈಗೊಳ್ಳುವ ಅಧಿಕಾರವನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ನೀಡಬೇಕು.**

*(ಮೂಲ ಮಹಿಷಿ ವರದಿ ಸಲಹೆ ಸಂಖ್ಯೆ –೨೪)*

ಡಾ. ಸರೋಜಿನಿ ಮಹಿಷಿ ವರದಿ ೧೦೦ಕ್ಕಿಂತ ಹೆಚ್ಚಿನ ಸಂಖ್ಯೆಯ ನೌಕರರಿರುವ ಖಾಸಗೀ ಉದ್ಯಮಗಳ ನೇಮಕಾತಿ ಆಯ್ಕೆ ಸಮಿತಿಯಲ್ಲಿ ರಾಜ್ಯ ಸರ್ಕಾರದ ಪ್ರತಿನಿಧಿಯನ್ನು ಸೇರಿಸುವಂತೆ ಉದ್ಯಮಿಗಳನ್ನು ಒತ್ತಾಯಿಸಬೇಕು (ಸಲಹೆ–೨೪) ಎಂದಿದೆ. ಒತ್ತಾಯಿಸುವುದು ಎಂದಿರುವುದರಿಂದ ಇದು ಪರಿಣಾಮಕಾರಿಯಾಗಿಲ್ಲ.

೭. **ಖಾಸಗಿ, ಕೇಂದ್ರ ಸಾರ್ವಜನಿಕ ಉದ್ಯಮಗಳ ನೇಮಕಾತಿ ಪಟ್ಟಿಯನ್ನು ನಿಯಮಿತವಾಗಿ ಪ್ರತಿವರ್ಷ ಸಂಬಂಧಪಟ್ಟ ಇಲಾಖೆಗೆ ಕಳುಹಿಸುವುದರ ಜೊತೆಗೆ ಕಡ್ಡಾಯವಾಗಿ ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ಸಲ್ಲಿಸಬೇಕು.**

*(ಮೂಲ ಮಹಿಷಿ ವರದಿ ಸಲಹೆ ಸಂಖ್ಯೆ –೨೮)*

ಡಾ. ಸರೋಜಿನಿ ಮಹಿಷಿ ವರದಿ ಸಲಹೆಯಂತೆ (ಅಂಶ–೨೮) ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಈ ಮಾಹಿತಿಯನ್ನು ತರಿಸಿಕೊಳ್ಳುತ್ತಿದೆ. ಉದ್ಯಮಗಳ ಕಳುಹಿಸಿದ ಮಾಹಿತಿಯ ಬಗ್ಗೆ ಕ್ರಮ ಜರುಗಿಸುತ್ತಿರುವ ಬಗ್ಗೆ ಸ್ಪಷ್ಟ ಮಾಹಿತಿಯಿಲ್ಲ. ಕ.ಅ.ಪ್ರಾಕ್ಕೆ ಮಾಹಿತಿಯಿದ್ದರೆ ಅನುಸರಣೆ ಸುಲಭ.

೮. **ತಂತ್ರಜ್ಞಾನದ ಕಾಲೋಚಿತ [update] ಬೆಳವಣಿಗೆಗೆ ಅನುಗುಣವಾಗಿ ಉದ್ಯೋಗ ತರಬೇತಿ ಕೇಂದ್ರಗಳಲ್ಲಿ ತರಬೇತಿ (ಐ.ಟಿ.ಐ) ನೀಡುವ ಹೊಣೆಯನ್ನು ನಿರ್ವಹಿಸಲು ಪ್ರತ್ಯೇಕ ತಾಂತ್ರಿಕ ಸಲಹಾ ಮಂಡಳಿಯನ್ನು ಆಯೋಜಿಸಬೇಕು. ಇದನ್ನು ಉದ್ಯೋಗ ಮತ್ತು ತರಬೇತಿ ಇಲಾಖೆ ಕಡ್ಡಾಯವಾಗಿ ನಿರ್ವಹಿಸಬೇಕು.**

*(ಮೂಲ ಮಹಿಷಿ ವರದಿ ಸಲಹೆ ಸಂಖ್ಯೆ –೨೧)*

ಮಹಿಷಿ ವರದಿಯಲ್ಲಿ ಈ ಸಲಹೆಯಿದೆ. ನಮಗೆ ಅಗತ್ಯವಾದ ಕೌಶಲವುಳ್ಳ (Trade) ಕೆಲಸಗಾರರು ಸಿಗುತ್ತಿಲ್ಲ ಎಂದು ಉದ್ಯಮಿಗಳು ಹೇಳುತ್ತಾರೆ. ಇತ್ತೀಚೆಗೆ ಉದ್ದಿಮೆಗಳ ಒಕ್ಕೂಟದ ಅಧ್ಯಕ್ಷರು ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

(ಹಿಂದೆ ಜಿಲ್ಲಾ ಮಟ್ಟದಲ್ಲಿ ವೃತ್ತಿ ತರಬೇತಿಗೆ ಕೈಗಾರಿಕಾ ತರಬೇತಿ ಕೇಂದ್ರ ಐ.ಟಿ.ಐ.ಗಳಿದ್ದವು, ಅವುಗಳು ಕಾಲಕ್ಕನುಗುಣವಾಗಿ ನವೀಕರಣಗೊಂಡಿಲ್ಲ ಖಾಸಗಿ ಐ.ಟಿ.ಐ.ಗಳಲ್ಲಿ ನಿರೀಕ್ಷಿತ ಗುಣಮಟ್ಟದ ತರಬೇತಿ ಸಿಗುತ್ತಿಲ್ಲ. ಆದ್ದರಿಂದ ಸರ್ಕಾರ ಉದ್ಯಮಗಳ ಸಹ ಭಾಗಿತ್ವದಲ್ಲಿ ಕುಶಲ ಕೇಂದ್ರಗಳನ್ನು ತೆರೆಯಬೇಕು)

೯. **ಕೇಂದ್ರ ಸರ್ಕಾರವು ಪ್ರಕಟಿಸುತ್ತಿರುವ ಎಂಪ್ಲಾಯ್‌ಮೆಂಟ್ ನ್ಯೂಸ್ ಮಾದರಿಯಲ್ಲಿ ರಾಜ್ಯ ಸರ್ಕಾರವು ರಾಜ್ಯದಲ್ಲಿ ಸೃಷ್ಟಿಯಾಗುವ ಎಲ್ಲ ವಲಯಗಳ ಉದ್ಯೋಗಾವಕಾಶವನ್ನು ಕನ್ನಡದಲ್ಲಿಯೇ ಜಾಹಿರಾತಿನ ಮೂಲಕ ಕನ್ನಡದ ಮುಖ್ಯ ರಾಜ್ಯ ದಿನಪತ್ರಿಕೆಗಳಲ್ಲಿ ಪ್ರಕಟಿಸಬೇಕು. ಅಲ್ಲದೆ ಇಂಥದ್ದನ್ನು ಪ್ರಕಟಿಸುವ ಅಧಿಕೃತ ಪತ್ರಿಕೆಯೊಂದನ್ನು [ಉದ್ಯೋಗ ವಾರ್ತಾ ಪತ್ರಿಕೆ] ಸರ್ಕಾರವೇ ಪ್ರಕಟಿಸಬೇಕು. ಇದರ ಜೊತೆಗೆ ಎಲ್ಲ ವಲಯಗಳಲ್ಲಿ ಸೃಷ್ಟಿಯಾಗುವ ಉದ್ಯೋಗ ಮಾಹಿತಿಯನ್ನು ನೀಡುವ ಜಾಲತಾಣವೊಂದನ್ನು [web portal] ರಚಿಸಿ ಸರ್ಕಾರವೇ ನಿರ್ವಹಿಸ ಬೇಕು. ಈ ಆದೇಶ ಪಾಲನೆಯಾಗುತ್ತಿದೆಯೇ ಎಂಬುದನ್ನು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವ ಅಧಿಕಾರವನ್ನು ವಾರ್ತಾ ಇಲಾಖೆಗೆ**



**ನೀಡಬೇಕು. ಸದರಿ ಮಾಹಿತಿಯನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ವಾರ್ತಾ ಇಲಾಖೆ ನಿಯಮಿತವಾಗಿ ಸಲ್ಲಿಸಬೇಕು.**

*(ಮೂಲ ಮಹಿಷಿ ವರದಿ ಸಲಹೆ ಸಂಖ್ಯೆ –೫೭)*

ಮಹಿಷಿ ವರದಿಯಲ್ಲಿರುವ ಸಲಹೆ (ಅಂಶ ೫೭) ಅದು ಇಂದಿಗೂ ಪ್ರಸ್ತುತ.

೧೦. (ಅ) **ಸ್ಥಳೀಯರು ಎಂದು ಪರಿಗಣಿಸಲು ರಾಜ್ಯದಲ್ಲಿ ೧೫ ವರ್ಷಗಳ ಕಾಲ ರಾಜ್ಯದಲ್ಲಿ ವಾಸವಾಗಿರಬೇಕಲ್ಲದೆ, ಕನ್ನಡ ಭಾಷಾ ಜ್ಞಾನವೂ ಇರಬೇಕು. ಅದಕ್ಕೆ ಕೆಳಗಿನ ದಾಖಲೆಗಳಲ್ಲಿ ಒಂದನ್ನು ಅವರು ಹೊಂದಿರಲೇಬೇಕು:**

೧. **ಶಾಲೆಯ ಸರ್ಟಿಫಿಕೇಟ್ (ಎಸ್.ಎಸ್.ಎಲ್.ಸಿ.ವರೆಗೆ ಕನ್ನಡ ಭಾಷೆಯನ್ನು ಒಂದು ವಿಷಯವಾಗಿ ಅಭ್ಯಸಿಸಿರಬೇಕು)**

೨. **ಪಡಿತರ ಚೀಟಿ (ರೇಷನ್ ಕಾರ್ಡ್)**

೩. **ಜನ್ಮ ದಾಖಲೆ (ಬರ್ಥ್ ಸರ್ಟಿಫಿಕೇಟ್)**

೪. **ಆಧಾರ್ ಕಾರ್ಡ್**

*(ಮೂಲ ಮಹಿಷಿ ವರದಿ ಸಲಹೆ ಸಂಖ್ಯೆ –೯)*

(ಆ) **ಹೊರರಾಜ್ಯಗಳಲ್ಲಿ ಕನ್ನಡ ಮಾಧ್ಯಮದಲ್ಲಿ ೧೦ನೇ ತರಗತಿಯವರೆಗೆ ಓದಿದ ವಿದ್ಯಾರ್ಥಿಗಳಿಗೂ ರಾಜ್ಯದಲ್ಲಿ ಓದಿರುವ ವಿದ್ಯಾರ್ಥಿಗಳಿಗೆ ಸಿಗುವ ಎಲ್ಲಾ ಸವಲತ್ತುಗಳೂ ಸಿಗಬೇಕು. ಅವರಿಗೆ ಉನ್ನತ ಶಿಕ್ಷಣಕ್ಕೆ ಹಾಗೂ ಉದ್ಯೋಗಕ್ಕೆ ತೆರೆದ ಅವಕಾಶವಿರಬೇಕು.**

*(ಹೊಸ ಸಲಹೆ)*

೧೧. **ರಾಜ್ಯದಲ್ಲಿರುವ ಕೇಂದ್ರ/ರಾಜ್ಯ ಸರ್ಕಾರಿ ಕಚೇರಿಗಳು, ಉದ್ಯಮಗಳು ಹಾಗೂ ಖಾಸಗಿ ವಲಯಗಳಲ್ಲಿ ನಾಮಫಲಕ, ಜಾಹಿರಾತು ಫಲಕ ಹೆದ್ದಾರಿ ಫಲಕಗಳನ್ನು ಹಾಕುವಾಗ ಕಡ್ಡಾಯವಾಗಿ ರಾಜ್ಯ ಭಾಷೆಯಾದ ಕನ್ನಡವನ್ನು ಮೊದಲ ಆದ್ಯತೆಯಾಗಿ ಪ್ರದರ್ಶಿಸಬೇಕು.**

*(ಹೊಸ ಸಲಹೆ)*

ತ್ರಿಭಾಷಾ ಸೂತ್ರದ ಅನುಷ್ಠಾನ, ಭಾರತ ಸರ್ಕಾರ, ಆದೇಶ ಸಂಖ್ಯೆ
No. 12019/10/91-OL (Int) dated 28.1.1992

The committee has recommended that all the offices of the Government of India, located in India or abroad, and the institutions receving grants from the Central Government located in A and B regions should also ensure that their respective Name-Plates, Rubber stamps, Letter-Heads, Logos etc. be prepared in Bilingual form and such institution located in C region should get these items prepared in trilingual form while getting these Letter-Heads, Name-Plates etc. prepared, it should be kept in mind that the Size of letters of all the language should be the same.

Region States / Union Territories falling in the Region

A. Bihar, Chhatisgarth, Haryana, Himachal Pradesh, Jharkhan, Madhya Pradesh, Rajasthan, Uttar Pradesh, Uttarakhand States and Andaman & Nicobar Islands, National Capital Territory of Delhi Union Territories.

B. Gujarat, Maharashtra and Paunjab Stages and Chandigarh Union Territory

C. All other States not included in the A and B Regions.

೧೨. **ರಾಜ್ಯದಲ್ಲಿರುವ ಐ.ಸಿ.ಎಸ್.ಸಿ, ಸಿ.ಬಿ.ಎಸ್.ಇ., ಕೇಂದ್ರೀಯ ವಿದ್ಯಾಲಯ, ನವೋದಯ ವಿದ್ಯಾಲಯ ಹಾಗೂ ಇತರ ಆಂಗ್ಲ ಭಾಷೆಯ ಶಿಕ್ಷಣ ಸಂಸ್ಥೆಗಳು ಒಂದರಿಂದ ಹತ್ತನೆ ತರಗತಿಯವರೆಗೆ ರಾಜ್ಯ ಭಾಷೆಯಾದ ಕನ್ನಡವನ್ನು ಒಂದು ವಿಷಯವಾಗಿ ಕಡ್ಡಾಯಗೊಳಿಸಬೇಕು.**

*(ಹೊಸ ಸಲಹೆ)*

೧೩. **ಕೇಂದ್ರ/ರಾಜ್ಯ ಸರ್ಕಾರ ಉನ್ನತ ಶಿಕ್ಷಣ ಅಥವಾ ಹುದ್ದೆಗಳ ನೇಮಕಾತಿಗಾಗಿ ನಡೆಸುವ ಯಾವುದೇ ಸ್ಪರ್ಧಾತ್ಮಕ ಪರೀಕ್ಷೆಗಳ ಪ್ರಶ್ನೆ ಪತ್ರಿಕೆಗಳು ಕಡ್ಡಾಯವಾಗಿ ಕನ್ನಡದಲ್ಲಿಯೂ ಇರಬೇಕು. ಅಭ್ಯರ್ಥಿಗಳು ಪರೀಕ್ಷೆಯಲ್ಲಿ ಕನ್ನಡದಲ್ಲಿ ಉತ್ತರಿಸುವ ಕುರಿತಂತೆ ರಾಜ್ಯ ಸರ್ಕಾರ ಆಯಾ ಇಲಾಖೆಗಳಲ್ಲಿ ಅಗತ್ಯ ಪದ ಭಂಡಾರಗಳನ್ನು, ಪಠ್ಯಗಳನ್ನು ಸೃಷ್ಟಿಸುವ ಕಾರ್ಯ ಮಾಡಬೇಕು.**

*(ಹೊಸ ಸಲಹೆ)*



೧೪. **ಕರ್ನಾಟಕ ಸರ್ಕಾರದ ಆಡಳಿತದಲ್ಲಿ ಬಳಸುವ ಎಲ್ಲ ತಂತ್ರಾಂಶಗಳಲ್ಲಿ, ಸಾರ್ವಜನಿಕ ಸಂಪರ್ಕದಲ್ಲಿ ಬಳಸುವ ಎಲ್ಲ ಸಾಧನಗಳಲ್ಲಿ, ಖಾಸಗಿ ವಲಯದ ಸಾರ್ವಜನಿಕ ಸಂಪರ್ಕದ ಅಭಿವ್ಯಕ್ತಿ ಮಾಹಿತಿಗಳಲ್ಲಿ ಕನ್ನಡವನ್ನು ಕಡ್ಡಾಯವಾಗಿ ಬಳಸಬೇಕು.**

*(ಹೊಸ ಸಲಹೆ)*

ಕರ್ನಾಟಕ ಸರ್ಕಾರ, ನಿಗಮ ಮಂಡಳಿಗಳು, ಆಡಳಿತದಲ್ಲಿ ಬಳಸುವ ತಂತ್ರಾಂಶಗಳು.

ಸಂಪರ್ಕ ಸಾಧನವಾಗಿ ಬಳಸುವ ಅಂತರ್ ಜಾಲತಾಣ, ಜಾಲತಾಣ (ವೆಬ್‌ಸೈಟ್), ಫೇಸ್‌ಬುಕ್, ಟ್ವಿಟರ್, ವಾಟ್ಸಪ್, ಲಿಂಕ್ಡ್ ಇನ್, ಮೊಬೈಲ್ ಆಪ್‌ಗಳು (ಅನ್ವಯ ತಂತ್ರಾಂಶಗಳು), ಮೊಬೈಲ್ ವ್ಯಾಲೆಟ್, ಮುಂತಾದವು.

ಬ್ಯಾಂಕಿಂಗ್, ಹಣ ಪಾವತಿ, ಮುಂತಾದೆಡೆ ಕನ್ನಡದಲ್ಲಿ ವ್ಯವಹಾರ

ಕೇಂದ್ರ ಸರ್ಕಾರದ ಸ್ವಾಮ್ಯದ ಸಂಸ್ಥೆಗಳು, ಸಂಪರ್ಕ, ಆಂತರಿಕ ಆಡಳಿತ.

ದೂರವಾಣಿ ಸಾಧನಗಳಲ್ಲಿ ಕನ್ನಡದ ಬಳಕೆಗೆ ಅವಕಾಶ (ಕೇಂದ್ರ ಸರ್ಕಾರ ಕಡ್ಡಾಯಗೊಳಿಸಬೇಕು).

ಕೇಂದ್ರ ಸರ್ಕಾರವು ತಂತ್ರಾಂಶದಲ್ಲಿ ಭಾರತೀಯ ಭಾಷೆಗಳ ಬಳಕೆ ಸಂಬಂಧ ಹೊರಡಿಸಿರುವ ಆದೇಶದ (IS I6333 : Part- 3, 2016) ಪ್ರತಿ ಕೆಳಗಿನಂತಿದೆ.

**GAZETTE OF THE INDIA, EXTRAORDINARY**

[Part II, Section 3, Sub-section (ii)]

**MINISTRY OF ELECTRONICS AND INFORMATION TECHNOLOGY**

New Delhi, the 24th October, 2016

**ORDER**

**SUBJECT: Mandating Indian Language Support for Mobile Phones as per IS 16333 (Part 3).**

In exercise of the power conferred by clause 10(1)(p) of Bureau of Indian Standard Act,1986 (63 of 1986) and in pursuance of clause (fa) of the rule 13 of the Bureau of Indian Standards Rules, 1987, the Central Government, hereby includes the Indian language support for mobile phone as per IS 16333 (Part-3) to the Schedule of "Electronics and Information Technology Goods (Requirement for Compulsory Registration) Order, 2012".

2. The provisions of "Electronics and Information Technology Goods (Requirements for Compulsory Registration) Order, 2012" except paragraph 1(2), shall apply for the aforesaid inclusion by virtue of this Order w.e.f. 1st July 2017.

Note: The Principal Order was published in the Gazette of India, Extraordinary vide S.O. number 2357(E), dated 3rd October, 2012 and subsequently amended vide S.O. 2034(E) dated 5th July 2013, S.O. 3022(E) dated 4th Oct 2013, S.O. 2905(E) dated 13th Nov 2014, S.O. 345(E) dated 3rd Feb 2016 and S.O. 638(E) dated 10th Feb 2016.

24/10/2016

(Rajiv Bansal)
Joint Secretary
F. No. 8(81)2015-IPHW

**IS 16333 (Part 3) : 2016**

**Mobile Phone Handsets** Part 3 Indian Language Support for Mobile Phone Handsets — Specific Requirements

**1 SCOPE**

This standard (Part 3) defines the requirements for mobile phone handsets for inputting of text in English, Hindi and at least one additional Indian official language along with facility of message readability for all 22 Indian official languages.

**2 REFERENCES**

The standard given below contains provisions, which through reference in this text constitute provisions of this standard. At the time of publication, the editions indicated were valid. All standards are subject to revision, and parties to agreement based on this standard are encouraged to investigate the possibility of applying the most recent editions of the standards listed as follows:

| *IS No.* | *Title* |
|---|---|
| 16333 (Part 1) : 2015 | Mobile phone handsets: Part 1 Safety requirements |
| 16350 : 2016 | Enhanced inscript keyboard layout. |